1652 (1973) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಮತ್ತು 2006–07 ರ ಸಾಲಿನಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿ ಸರ್ಕಾರಿ ಟಿ ಸಿ ಹೆಚ್ ಹಾಗೂ ಬಿ ಎಡ್ ಕಾಲೇಜು ಸ್ಥಾಪನೆಯಾಗಿದೆ (ಸ್ಥಳವಾರು ವಿವರ ನೀಡುವುದು)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಸರ್ಕಾರಿ ಟಿ ಸಿ ಹೆಚ್ ಹಾಗೂ ಬಿ ಎಡ್ ಕಾಲೇಜುಗಳಿವೆ, (ವಿವರ ನೀಡುವುದು)

ಇ) ಸಿರ್ಸಿಯಲ್ಲಿ ಹಾಗೂ ಯಲ್ಲಾಪುರದಲ್ಲಿ ಸರ್ಕಾರಿ ಟಿ ಸಿ ಹೆಚ್ ಹಾಗೂ ಬಿ ಎಡ್ ಕಾಲೇಜ್ ಸ್ಥಾಪಿಸಲು ತೊಂದರೆಗಳೇನು,

ಈ) ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2005–06 ಮತ್ತು 2006–07 ರ ಸಾಲಿನಲ್ಲಿ ರಾಜ್ಯದಲ್ಲಿ ಯಾವುದೇ ಸರ್ಕಾರಿ ಟಿ ಸಿಹೆಚ್ ಹಾಗೂ ಬಿ ಎಡ್ ಕಾಲೇಜು ಸ್ಥಾಪನೆಯಾಗಿರುವುದಿಲ್ಲ

ಆ) ಉತ್ತರ ಕನ್ನಡ ಜಿಲ್ಲೆಯ ಕುಮುಟಾದಲ್ಲಿ ಸರ್ಕಾರಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು (ಡಯಟ್) ನಡೆಯುತ್ತಿದೆ

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ 1 ಸರ್ಕಾರಿ ಮತ್ತು 9 ಖಾಸಗಿ ಅನುದಾನ ರಹಿತ ಡಿ ಇಡಿ ಕಾಲೇಜುಗಳು ಹಾಗೂ 1 ಅನುದಾನಿತ ಮತ್ತು 5 ಅನುದಾನ ರಹಿತ ಬಿ ಇಡಿ ಕಾಲೇಜುಗಳು ಇರುವುದರಿಂದ ಹೆಚ್ಚುವರಿ ಕಾಲೇಜುಗಳ ಅವಶ್ಯಕತೆ ಕಂಡುಬರುವುದಿಲ್ಲ

ಈ) ಉದ್ಭವಿಸುವುದಿಲ್ಲ